
# ದೇವಸ್–ಆಂಟ್ರಿಕ್ಸ್ ಜಟಾಪಟಿ

ಖಾಸಗಿಯವರನ್ನು ಯಾವುದೇ ವ್ಯವಹಾರದಲ್ಲಿ ಭಾಗೀದಾರರನ್ನಾಗಿಸುವ ಮುನ್ನ ಸಾಕಷ್ಟು ಎಚ್ಚರಿಕೆ ವಹಿಸಬೇಕು ಎನ್ನುವುದಕ್ಕೆ ದೇವಸ್ ಮತ್ತು ಭಾರತ ಸರ್ಕಾರದ ಆಂಟ್ರಿಕ್ಸ್ ಸಂಸ್ಥೆಯ ನಡುವೆ ನಡೆದ ಅಹಿತಕರ ಘಟನೆಗಳೇ ಸಾಕ್ಷಿ.

ಭಾರತದ ಬಾಹ್ಯಾಕಾಶ ಏಜೆನ್ಸಿಯ ವಾಣಿಜ್ಯ ಅಂಗ ಎಂದೇ ಖ್ಯಾತವಾಗಿರುವ ‘ಆಂಟ್ರಿಕ್ಸ್’ 2005ರ ಜನವರಿ 28ರಂದು ಬೆಂಗಳೂರು ಮೂಲದ ದೇವಸ್ (DEVAS – Digitally enhanced Vedio and Audio Services) ಮಲ್ಟಿಮೀಡಿಯ ಕಂಪನಿ ಜೊತೆ ತನ್ನ ಎರಡು ಉಪಗ್ರಹಗಳನ್ನು ಬಳಸಿ ಭಾರತದ ಮೊಬೈಲ್ ಪ್ಲಾಟ್‌ಫಾರಂಗಳಿಗೆ 167 ಕೋಟಿ ರೂಪಾಯಿ ವೆಚ್ಚದಲ್ಲಿ 12 ವರ್ಷಗಳ ಕಾಲ ಮೊಬೈಲ್ ಸಂಪರ್ಕ ಸೇವೆ ಒದಗಿಸುವಂತೆ ಇಸ್ರೋ ಒಪ್ಪಂದ ಮಾಡಿಕೊಂಡಿತ್ತು. 766 ಕೋಟಿ ರೂಪಾಯಿ ವೆಚ್ಚದಲ್ಲಿ ತಯಾರಾಗಿದ್ದ ಎರಡು ಕೃತಕ ಉಪಗ್ರಹಗಳ ಮೂಲಕ ಬಹುಮಾಧ್ಯಮ ಮತ್ತು ಮಾಹಿತಿ ಸೇವೆಯನ್ನು ಪಡೆದುಕೊಳ್ಳಲು ಖಾಸಗೀ ಕಂಪನಿಯನ್ನು ಇಸ್ರೋ ಆಶ್ರಯಿಸಿದ್ದು ಅದೇ ಮೊದಲು. ಪ್ರಥಮ ಚುಂಬನಂ ದಂತಭಗ್ನಂ ಎಂಬಂತೆ ಒಪ್ಪಂದ ಕೆಲವೇ ದಿನಗಳಲ್ಲಿ ವಿವಾದಕ್ಕೊಳಗಾಯಿತು.

ಒಪ್ಪಂದ ನಿಭಾಯಿಸಲು 2006–2009ರ ನಡುವೆ ವಿದೇಶಿ ಹಣಕಾಸು ನೆರವು ಪಡೆದುಕೊಂಡ ದೇವಸ್, 2009ರಲ್ಲಿ 579 ಕೋಟಿ ರೂಪಾಯಿ ಬಂಡವಾಳ ಹೂಡಿಕೆ ಮಾಡಿತು. 2011ರ ಯುಪಿಎ ಸರ್ಕಾರದ ಅವಧಿಯಲ್ಲಿ, 2ಜಿ ತರಂಗಾಂತರ ಹರಾಜಿನ ಅವ್ಯವಹಾರ ಬೆಳಕಿಗೆ ಬರುತ್ತಿದ್ದಂತೆ ಆಂಟ್ರಿಕ್ಸ್, ದೇವಸ್‌ನೊಂದಿಗಿನ ತನ್ನ ಒಪ್ಪಂದವನ್ನು ಹಿಂದುಮುಂದು ನೋಡದೆ ಮುರಿದುಕೊಂಡಿತು. ಇದರಿಂದ ಅಪಾರ ನಷ್ಟ ಅನುಭವಿಸುವ ಸೂಚನೆ ಕಂಡುಕೊಂಡ ದೇವಸ್, ತನಗಾದ ನಷ್ಟ ತುಂಬಿಕೊಡುವಂತೆ ನೆದರ್‌ಲ್ಯಾಂಡ್ಸ್‌ನ ಅಂತರರಾಷ್ಟ್ರೀಯ ಛೇಂಬರ್ ಆಫ್ ಕಾಮರ್ಸ್‌ಗೆ ಆಂಟ್ರಿಕ್ಸ್ ಕಂಪನಿ ವಿರುದ್ಧದ ವ್ಯಾಜ್ಯ ಕೊಂಡೊಯ್ಯಿತು. ಬಂಡವಾಳ ಹೂಡಿದ್ದ ಜರ್ಮನಿ, ಅಮೆರಿಕಗಳು ಇಸ್ರೋ ವಿರುದ್ಧ ದೇವಸ್ ಹೂಡಿದ್ದ ಕೇಸ್‌ಗೆ ಬೆಂಬಲ ನೀಡಿ ಅಂತರರಾಷ್ಟ್ರೀಯ ಚೇಂಬರ್ ಆಫ್ ಕಾಮರ್ಸ್‌ಗೆ ದೂರು ನೀಡಿದವು. ತೀರ್ಪು ನೀಡಿದ ಚೇಂಬರ್ ಆಫ್ ಕಾಮರ್ಸ್, ಆಂಟ್ರಿಕ್ಸ್ ಕಂಪನಿ 562 ದಶಲಕ್ಷ ಡಾಲರ್ ದಂಡ ನೀಡಬೇಕೆಂದು ತೀರ್ಪು ನೀಡಿತು. ಇದರ ವಿರುದ್ಧ ಭಾರತ ಮತ್ತು ಅಮೆರಿಕದ ನ್ಯಾಯಾಲಯಗಳಲ್ಲಿ ಅಹವಾಲು ಹಾಕಿದ ಇಸ್ರೋ, ಭದ್ರತೆಯ ಕಾರಣಗಳಿಗಾಗಿ ಒಪ್ಪಂದ ರದ್ದು ಮಾಡಲಾಯಿತು ಮತ್ತು ಒಪ್ಪಂದದಲ್ಲಿ ಆಂಟ್ರಿಕ್ಸ್‌ನ ಹಿರಿಯ ವಿಜ್ಞಾನಿಗಳು ವೈಯಕ್ತಿಕ ಲಾಭಗಳಿಗಾಗಿ ಶಾಮೀಲಾಗಿದ್ದರು ಎಂದು ಸಮಜಾಯಿಷಿ ನೀಡಿತು. ದೇವಸ್‌ಗೆ 78 ಕೋಟಿ ರೂಪಾಯಿಗಳಷ್ಟು ಲಾಭ ಮಾಡಿಕೊಡಲು ಪ್ರಯತ್ನಿಸಿದ್ದರು ಎಂಬ ಆರೋಪದ ಮೇಲೆ ಇಸ್ರೋ ಮುಖ್ಯಸ್ಥ ಮಾಧವನ್ ನಾಯರ್ ಮತ್ತು ಕೆಲವು ಅಧಿಕಾರಗಳ

ನಿಗಾ, ಸಂಪನ್ಮೂಲ ಪತ್ತೆ ಮತ್ತು ಕ್ರೋಢೀಕರಣಗಳ ಬಗ್ಗೆ ಕೆಲಸ ಮಾಡುತ್ತಲೇ ಬಂದಿದೆ. ಮಾಹಿತಿ, ಚಿತ್ರ, ಹವಾಮಾನ, ವ್ಯವಸಾಯ, ಸರಕುಸಾಗಣೆ, ನಗರಾಭಿವೃದ್ಧಿ, ಕಾಡಿನ ನಿರ್ವಹಣೆ, ಮಿಲಿಟರಿ ಕಾರ್ಯಾಚರಣೆ, ನೀರಿನ ತಾಣಗಳ ಸಂರಕ್ಷಣೆಗೆ ಸಂಬಂಧಿಸಿದ ಬೇಡಿಕೆ ಪೂರೈಸಲು ಇಸ್ರೋ ಈಗಿರುವ ತನ್ನ ಗಾತ್ರವನ್ನು ಹತ್ತು ಪಟ್ಟು ಹೆಚ್ಚಿಸಿಕೊಂಡರೆ ಮಾತ್ರ ಅವಶ್ಯಕತೆಗಳನ್ನು ಪೂರೈಸಲು ಸಾಧ್ಯ. ಅದು ಈ ಕೂಡಲೇ ಸಾಧ್ಯವಿಲ್ಲ. ಅದಕ್ಕಾಗಿ ಖಾಸಗಿಯವರು ಬೇಕು.



## ಬೇಕು ಕಡು ಎಚ್ಚರ

ಖಾಸಗಿಯವರು ಬಂದಾಕ್ಷಣ ಅಮೆರಿಕದ ‘ಬೋಯಿಂಗ್’, ‘ಸ್ಪೇಸ್ X’ನಂತೆ ನಮ್ಮ ಕೆಲಸ ರಾತೋರಾತ್ರಿ ವಿಶ್ವಮಟ್ಟದಲ್ಲಿ ಗುರುತಿಸಿಕೊಳ್ಳುತ್ತವೆ ಎನ್ನಲು ಸರಿಯಾದ ಆಧಾರಗಳಿಲ್ಲ. ಅಂದುಕೊಂಡದ್ದೆಲ್ಲ ಆಗೇಬಿಡುತ್ತದೆ ಎಂಬ ಗ್ಯಾರಂಟಿಯೇನೂ ಇಲ್ಲ. ಬಹುಪಾಲು ಖಾಸಗಿ ಕಂಪನಿಗಳು ಆರಂಭದಲ್ಲಿ ಭಾರೀ ಉತ್ಸಾಹ, ಭರವಸೆಗಳೊಂದಿಗೆ ಕ್ಷೇತ್ರಕ್ಕೆ ಕಾಲಿಡುತ್ತವೆ. ಆ ಉತ್ಸಾಹ ಬಹಳ ದಿನ ಉಳಿಯುವುದಿಲ್ಲ. ಖಾಸಗಿ ಕಂಪನಿಗಳು ದೇಶಕ್ಕಾಗಿ ಕೆಲಸ ಮಾಡದೆ ವೈಯಕ್ತಿಕ ಲಾಭ ಬೆಳವಣಿಗೆಯತ್ತ ಗಮನ ಹರಿಸಿದರೆ, ‘ಬಾಹ್ಯಾಕಾಶ ಚಟುವಟಿಕೆಗಳ ಮೂಲಕ ದೇಶದ ಅಭಿವೃದ್ಧಿ’ ಎನ್ನುವ ಮಹತ್ವದ ಉದ್ದೇಶಕ್ಕೆ ಭಾರೀ ಹಿನ್ನಡೆಯಾಗಲಿದೆ. ಹಣವಂತರು ಬಾಹ್ಯಾಕಾಶ ಕ್ಷೇತ್ರದ ಏಕಸ್ವಾಮ್ಯಕ್ಕೆ ಕೈ ಹಾಕಿ ಸರ್ಕಾರಿ ಸವಲತ್ತುಗಳನ್ನು ದುರುಪಯೋಗ ಪಡಿಸಿಕೊಂಡರೆ ಸಾಮಾಜಿಕ ಅಭಿವೃದ್ಧಿ ಹಳ್ಳ ಹಿಡಿಯುತ್ತದೆ.

ಸರ್ಕಾರಿ ಸಂಸ್ಥೆಗಳು ದೇಶದ ಜನರಿಗೆ, ವಿರೋಧ ಪಕ್ಷದವರಿಗೆ, ತೆರಿಗೆ ಪಾವತಿಸುವವರಿಗೆ ಉತ್ತರದಾಯಿ ಆಗಿರಲೇಬೇಕು. ಖಾಸಗಿಯವರಿಗೆ ಲಾಭ ಮತ್ತು ಷೇರುದಾರರ ಕ್ಷೇಮ ಮುಖ್ಯವೇ ಹೊರತು ಇನ್ನಾವ ಗುರುತರ ಜವಾಬ್ದಾರಿಯೂ ಇರುವುದಿಲ್ಲ. ಸರ್ಕಾರಿ ಸ್ವಾಮ್ಯದ ಸಂಸ್ಥೆಗಳು ಸಂಶೋಧನೆ, ಅಭಿವೃದ್ಧಿ ಮತ್ತು ತಂತ್ರಜ್ಞಾನಗಳ ಕಡೆ ಒತ್ತು ನೀಡುತ್ತ, ಬಾಹ್ಯಾಕಾಶದ ಮೂಲೆಮೂಲೆಗೂ ನುಗ್ಗಿ ಅನ್ವೇಷಿಸುವುದಲ್ಲದೇ ಕೋಟ್ಯಂತರ ಜನರ ತೆರಿಗೆ ಹಣದ ಖರ್ಚಿನ ಲೆಕ್ಕ ನೀಡಬೇಕಾಗುತ್ತದೆ. ಹಾಗಾಗಿಯೇ ಖಾಸಗಿ ವಲಯದ ಭಾಗೀದಾರಿಕೆ ಬಗ್ಗೆ ತುಂಬಾ ಜಾಗರೂಕರಾಗಿರಬೇಕು. ಸಂವಹನಕ್ಕಾಗಿ ಮೇಲೆ ಹೋಗುವ ಉಪಗ್ರಹಗಳು ದೇಶಗಳಿಗೆ ಸಂಬಂಧಿಸಿದ ಎಲ್ಲ ಬಗೆಯ ಮಾಹಿತಿಯನ್ನು ಸಂಗ್ರಹಿಸುತ್ತವೆ. ಆ ಮಾಹಿತಿ ಶತ್ರು ದೇಶಗಳ ಪಾಲಾಗದಂತೆ ತಡೆಯುವ ಗುರುತರ ಹೊಣೆ ಸರ್ಕಾರದ್ದು. ರಾಕೆಟ್ ಉಡಾವಣೆಗೆ ಸಂಬಂಧಿಸಿದ ತಂತ್ರಜ್ಞಾನ ಮತ್ತು ಗೌಪ್ಯ ಮಾಹಿತಿಗಳು ಇತರರ ಪಾಲಾಗದಂತೆಯೂ ತಡೆಯಬೇಕು. ಖಾಸಗಿಯವರನ್ನು ಪ್ರೋತ್ಸಾಹಿಸಿ ಉನ್ನತ ಸಾಧನೆಯ ಕನಸು ಕಾಣುತ್ತಿರುವ ನಾವು ಖಾಸಗಿ ಕ್ಷೇತ್ರದವರ ಕೆಲಸಗಳ ಮೇಲೆ ಸರಿಯಾದ ನಿಯಂತ್ರಣ ಹೊಂದಿರಲೇಬೇಕು. ಕೇವಲ ಬಂಡವಾಳದ ಮೇಲೆ ಆಸೆ ಪಟ್ಟು ದೇಶದ ಭದ್ರತೆ